ಕರ್ನಾಟಕ ವಿಧಾನ ಸಭೆ

299 ಶ್ರೀ ಹ್ಯಾರೀಸ್ ಎನ್.ಎ[ಶಾಂತಿನಗರ]
ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.

ಅ. ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಕುರಿತು ಸರ್ಕಾರ ಮಾಡುತ್ತಿರುವ ತಲಾವಾರು ಮತ್ತು ಒಟ್ಟು ಮೊತ್ತ ಎಷ್ಟು; ಸರ್ಕಾರಿ ಶಾಲೆಗಳಲ್ಲಿ ಈ ಸೌಲಭ್ಯವನ್ನು ಪಡೆಯುವ ಮಕ್ಕಳ ಸಂಖ್ಯೆ ಎಷ್ಟು;

2008–09ನೇ ಸಾಲಿಗೆ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಗಾಗಿ ಸರ್ಕಾರವು ಯೋಜನೆಯಡಿ ಒಟ್ಟು 98638.78ಲಕ್ಷರೂಗಳನ್ನು ಮತ್ತು ಯೋಜನೇತರದಡಿ 367696.47ಲಕ್ಷರೂಗಳನ್ನು ಖರ್ಚು ಮಾಡಿದೆ. ಸರ್ಕಾರದ ವತಿಯಿಂದ ಪ್ರತಿ ಮಕ್ಕಳಿಗೆ [ಖಾಸಗಿ ಮತ್ತು ಸರ್ಕಾರಿ] 8008.51 ರೂ ವೆಚ್ಚವಾಗುತ್ತಿದೆ.

ಸರ್ಕಾರಿ ಮತ್ತು ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು 58.23ಲಕ್ಷ ಮಕ್ಕಳು ಈ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

ಆ. ಗುಣ ಮಟ್ಟದ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ನೀಡುತ್ತಿರುವ ಖಾಸಗಿ ಶಿಕ್ಷಣ ವಲಯದ ಮಾದರಿಯಲ್ಲಿ ಶಿಕ್ಷಣ ನೀಡುವ ದಿಶೆಯಲ್ಲಿ ಸರ್ಕಾರದ ವೈಫಲ್ಯತೆಗೆ ಕಾರಣಗಳೇನು; ಅವುಗಳ ನಿವಾರಣೆಗಾಗಿ ಸರ್ಕಾರದ ಕ್ರಮಗಳೇನು;

ಸರ್ಕಾರಿ ಶಾಲೆಗಳಲ್ಲಿ ಗುಣ ಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ನೀಡಲು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಈ ಕೆಳ ಕಂಡಂತೆ ಕ್ರಮವಹಿಸಲಾಗಿದೆ.

- 13691 ಶಾಲೆಗಳಲ್ಲಿ ನಲಿ–ಕಲಿ ವಿಧಾನದಲ್ಲಿ ಬೋಧನೆ ಮಾಡಲಾಗುತ್ತಿದ್ದು, 2009–10ನೇ ಸಾಲಿಗೆ ರಾಜ್ಯದ ಎಲ್ಲಾ ಸರ್ಕಾರಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.
- ಶಿಕ್ಷಕರ ಸಬಲೀಕರಣಕ್ಕಾಗಿ ಗರಿಷ್ಠ ವಾರ್ಷಿಕ 20 ದಿನಗಳ ಸೇವಾ ನಿರತ ತರಬೇತಿ ನೀಡಲಾಗುತ್ತಿದೆ.
- ಆಯ್ದ 9 ಜಿಲ್ಲೆಗಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸಂಚಾರಿ ವಿಜ್ಞಾನ ಪ್ರಯೋಗಾಲಯದ ವ್ಯವಸ್ಥೆ ಕಲ್ಪಿಸಲಾಗಿದೆ.
- ಆಯ್ದ ಶಾಲೆಗಳಲ್ಲಿ ಕಂಪ್ಯೂಟರ್ ಆಧಾರಿತ ಶಿಕ್ಷಣ ನೀಡಲಾಗುತ್ತಿದೆ.
- ಗುಲ್ಬರ್ಗಾ, ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿನ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಎಜುಸಾಟ್ ಮೂಲಕ ಶಿಕ್ಷಣ ನೀಡಲಾಗುತ್ತಿದೆ.
- ಓದುವ ಕೌಶಲ್ಯ ಉತ್ತಮ ಪಡಿಸಲು ಓದುವೆ ನಾನು ಕಾರ್ಯಕ್ರಮ ರಾಜ್ಯದ ಶೈಕ್ಷಣಿಕವಾಗಿ ಹಿಂದುಳಿದ 11 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

ಇ. ಪ್ರಾಥಮಿಕ ಶಿಕ್ಷಣವನ್ನು ಗುಣಮಟ್ಟದೊಂದಿಗೆ ಖಾಸಗಿ ವಲಯಕ್ಕೆ ಸರಿ ಸಮವಾಗಿ ನೀಡುವ ನಿಟ್ಟಿನಲ್ಲಿ ಸರ್ಕಾರದ ನೀತಿ ಸಂಹಿತೆಗಳೇನು?

ಸರ್ಕಾರಿ ಶಾಲೆಗಳ ಎಲ್ಲಾ ಮಕ್ಕಳು ಶಾಲೆಗೆ ನಿರಂತರವಾಗಿ ಹಾಜರಾಗಲು ಮತ್ತು ಮಧ್ಯದಲ್ಲಿ ಶಾಲೆ ಬಿಡದಿರಲು ತನ್ಮೂಲಕ ವಿದ್ಯಾರ್ಥಿಗಳು ಉತ್ತಮವಾಗಿ ಕಲಿಯಲು ಸಾಧ್ಯವಾಗುವಂತೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

ಇಡಿ: 51 : ಯೋಸಕ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

300

ಶ್ರೀ ಹ್ಯಾರೀಸ್ ಎನ್.ಎ

ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು.

ಅ) ರಾಜ್ಯದಲ್ಲಿ ಸಾರ್ವಜನಿಕರಿಂದ ವಸೂಲು ಮಾಡುತ್ತಿರುವ ಗ್ರಂಥಾಲಯ ಕರದ ವಾರ್ಷಿಕ ಮೊತ್ತ ಎಷ್ಟು; ಪಾವತಿಯಾಗದೇ ಉಳಿದಿರುವ ಹಣದ ಮೊತ್ತ ಎಷ್ಟು; ಬಾಕಿ ಪಾವತಿಗಾಗಿ ಕೈಗೊಂಡ ಕ್ರಮಗಳೇನು;

ಆ) ಗ್ರಾಮ ಪಂಚಾಯಿತಿಗಳಿಂದ ಮತ್ತು ಮಹಾನಗರ ಪಾಲಿಕೆಗಳಿಂದ ಹಾಗೂ ಮತ್ತಿತರ ಸಂಸ್ಥೆಗಳಿಂದ ಬಾಕಿ ವಸೂಲಾತಿಗಾಗಿ ಸರ್ಕಾರದ ಮುಂದಿರುವ ಕ್ರಮಗಳೇನು;

ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳು ವಸೂಲು ಮಾಡುವ ಆಸ್ತಿ ತೆರಿಗೆಗಳ ಮೇಲೆ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ, 1965ರ ಸೆಕ್ಷನ್ 30 ರಂತೆ ಶೇ.6ರಷ್ಟು ಮೊತ್ತವನ್ನು ಗ್ರಂಥಾಲಯ ಕರ ವಿಧಿಸಲಾಗುತ್ತಿದೆ. ಅದರಂತೆ ದಿನಾಂಕ:01-04-2007 ರಿಂದ 31.12.2008ರವರೆಗೆ ಒಟ್ಟು ರೂ.35.00 ಕೋಟಿ ಗ್ರಂಥಾಲಯ ಕರ ವಸೂಲಾಗಿರುತ್ತದೆ. ದಿನಾಂಕ:31.03.2007ರ ಅಂತ್ಯಕ್ಕೆ ರಾಜ್ಯದ ವಿವಿಧ ಮಹಾನಗರ ಪಾಲಿಕೆ, ನಗರ ಸಭೆಗಳು, ಪುರಸಭೆಗಳು, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ಹಾಗೂ ಇತರೆ ಅಧಿಸೂಚಿತ ಸಂಸ್ಥೆಗಳಿಂದ ಒಟ್ಟು ರೂ.52.20 ಕೋಟಿ ಗ್ರಂಥಾಲಯ ಕರ ಬಾಕಿ ಇರುತ್ತದೆ. ಸದರಿ ಬಾಕಿ ಗ್ರಂಥಾಲಯ ಕರ ವಸೂಲಾತಿ ಕುರಿತು ಆಯಾಯ ನಗರ/ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳಿಗೆ ಜವಾಬ್ದಾರಿ ವಹಿಸಲಾಗಿದ್ದು, ಅವರು ಸಂಬಂಧಿಸಿದ ಜಿಲ್ಲೆಯ ನಗರ ಸಭೆ, ಮಹಾನಗರ ಪಾಲಿಕೆ ಇವರೊಂದಿಗೆ ನಿರಂತರ ಸಂಪರ್ಕ ಹೊಂದಿರುತ್ತಾರೆ.